

# ದೆಹಲಿ ರಸ್ತೆಯ ನಾರೀಶಕ್ತಿ

■ ಪ್ರವೀಣ ಕುಲಕರ್ಣಿ

ನವದೆಹಲಿಯ ಹಲವು ಬಸ್ ಸ್ಟಾಪ್‌ಗಳಲ್ಲಿ ಈಗ ಹೊಸ ಸೆಲೆಬ್ರಿಟಿಗಳದ್ದೇ ಮಾತು. ‘ಇಗೋ ಬಸ್ ಬಂತು ನೋಡಿ, ಅದರ ಚಾಲಕರ ಸೀಟಿನಲ್ಲಿ ಇರುವವರನ್ನು ಗಮನಿಸಿ’ ಎಂದು ಬೆರಗಿನಿಂದ ಹೇಳುವ ನೋಟಗಳು ಕಾಣಸಿಗುತ್ತವೆ. ಅಂತಹ ಸೋಜಿಗವನ್ನು ಮೂಡಿಸಿದವರು ದೆಹಲಿ ಸಾರಿಗೆ ನಿಗಮದ ಬಸ್‌ಗಳ ಚಾಲಕರಾಗಿ ಸೇವೆಗೆ ಸೇರಿದ ನಾರಿಮಣಿಯರು! ಅವರೆಲ್ಲ ದೆಹಲಿಯ ಬಸ್ ಪ್ರಯಾಣಿಕರಿಗೆ ಈಗ ಸೆಲೆಬ್ರಿಟಿಗಳಂತೆ ಗೋಚರಿಸುತ್ತಿದ್ದಾರೆ. ಹಾಗೆ ಬಸ್ ಚಾಲಕಿಯರಾಗಿ ಕಾರ್ಯ ನಿರ್ವಹಿಸುತ್ತಿರುವ ಹನ್ನೊಂದು ಮಂದಿ ಮಹಿಳೆಯರಲ್ಲಿ ಕೋಮಲಾ ಚೌಧರಿ ಕೂಡ ಒಬ್ಬರು.

ಕೇವಲ 23ರ ಹರೆಯದ ಕೋಮಲಾಗೆ ಚಾಲಕಿ ಆಗಿರುವುದು ಎಲ್ಲಿಲ್ಲದ ಹಿಗ್ಗು ಮೂಡಿಸಿದೆ. ‘ಎಷ್ಟೋ ಜನ ಪ್ರಯಾಣಿಕರಿಗೆ ಬಸ್ ಏರುವಾಗ ಅದನ್ನು ಓಡಿಸುತ್ತಿರುವುದು ಮಹಿಳೆ ಎನ್ನುವುದು ಗೊತ್ತೇ ಇರುವುದಿಲ್ಲ. ಬಸ್‌ನಿಂದ ಇಳಿಯುವಾಗ ನಾನು ಡ್ರೈವಿಂಗ್ ಸೀಟ್‌ನಲ್ಲಿ ಕುಳಿತಿದ್ದು ನೋಡಿ ಸೋಜಿಗ ವ್ಯಕ್ತಪಡಿಸುತ್ತಾರೆ. ಕೆಲವರು ವಿಡಿಯೊ ಮಾಡುತ್ತಾರೆ. ಇನ್ನು ಕೆಲವರು ನನ್ನೊಂದಿಗೆ ಸೆಲ್ಫಿ ತೆಗೆದುಕೊಳ್ಳುತ್ತಾರೆ. ಎಲ್ಲರೂ ನನ್ನನ್ನು ಸೆಲೆಬ್ರಿಟಿಯಂತೆ ಕಾಣುತ್ತಾರೆ’ ಎಂದು ಹೇಳುತ್ತಾರೆ.

ಬಸ್ ಚಲಾಯಿಸಲು ತರಬೇತಿ ಪಡೆಯುತ್ತಿದ್ದ ಸಂದರ್ಭಕ್ಕೂ ಪ್ರಯಾಣಿಕರನ್ನು ಹೊಂದಿದ ಬಸ್ಸನ್ನು ರಸ್ತೆಯಲ್ಲಿ ಓಡಿಸುವುದಕ್ಕೂ ಅಜಗಜಾಂತರ ಇದೆ. ಏಕೆಂದರೆ, ತರಬೇತಿ ಪಡೆಯುತ್ತಿದ್ದಾಗ ನಾವು ಸ್ಟಾಪ್‌ನಲ್ಲಿ ಬಸ್ ನಿಲ್ಲಿಸುತ್ತಿರಲಿಲ್ಲ. ಅಲ್ಲದೆ, ತುಂಬಾ ಬ್ಯುಸಿಯಾಗಿದ್ದ ರಸ್ತೆಗಳಲ್ಲಿ ಹೋಗುತ್ತಿರಲಿಲ್ಲ ಎಂದೂ ಕೋಮಲಾ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾರೆ. ಇವರೊಂದಿಗೆ ಬಸ್ ಚಾಲನೆಯ ಉದ್ಯೋಗಕ್ಕೆ ಸೇರಿದ ಸಂತೋಷ್ ಕುಮಾರಿ ಅವರದು ತುಂಬಾ ವಿಭಿನ್ನವಾದ ಅನುಭವ. ಬಾಲಕಿಯಾಗಿದ್ದಾಗ ಸೈಕಲ್ ಓಡಿಸಿದ್ದು ಬಿಟ್ಟರೆ ಬೇರೆ ಯಾವ ವಾಹನವನ್ನೂ ಚಲಾಯಿಸಿದ ಅನುಭವ ಅವರಿಗಿರಲಿಲ್ಲ. ಈಗ ಹೆಮ್ಮೆಯಿಂದ ಬಸ್ ಓಡಿಸುತ್ತಿದ್ದಾರೆ.

‘ಇವಳೇನು ಬಸ್ ಓಡಿಸುತ್ತಾಳೆ ಎಂದು ಕೆಲವರು ಅನುಮಾನದಿಂದ ನೋಡುತ್ತಾರೆ. ಆದರೆ, ಉಳಿದ ಬಸ್‌ಗಳಂತೆಯೇ ನಮ್ಮ ಬಸ್ ಕೂಡ ಹಿಂದೆ ಬೀಳದಂತೆ ಹೊರಟಾಗ ಅವರು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ’ ಎಂದು ಸಂತೋಷ್ ಕುಮಾರಿ ಹೇಳುತ್ತಾರೆ. ‘ಕೆಲವು ರಸ್ತೆಗಳು ತುಂಬಾ ಕಿರಿದಾಗಿವೆ. ತಿರುವುಗಳು ಕೂಡ ಅಷ್ಟೇ ಕಡಿದಾಗಿವೆ. ಅಂತಹ ಕಡೆಗಳಲ್ಲಿ ಬಸ್ ಓಡಿಸುವಾಗ ಇದ್ದಕ್ಕಿದ್ದಂತೆ ಬ್ರೇಕ್ ಹಾಕುವ ಪ್ರಮೇಯ ಬಂದರೆ, ಮಹಿಳೆ ಬಸ್ ಓಡಿಸುತ್ತಿರುವ ಕಾರಣ ಹೀಗೆಲ್ಲ ಆಗುತ್ತಿದೆ ಎನ್ನುವ ಕುಹಕದ ಮಾತು ಆಡುವವರೂ ಇದ್ದಾರೆ’ ಎಂದು ಹೇಳಲು ಅವರು ಮರೆಯುವುದಿಲ್ಲ.

ದೆಹಲಿ ಸರ್ಕಾರದ ‘ಮಿಷನ್ ಪರಿವರ್ತನ್’ನ ಭಾಗವಾಗಿ ಮಹಿಳೆಯರಿಗೆ ಬಸ್ ಚಾಲನಾ ತರಬೇತಿ ನೀಡಲಾಗಿದೆ. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದವರಿಗೆ ಉದ್ಯೋಗವನ್ನೂ ನೀಡಲಾಗಿದೆ. ಬಸ್ ಚಾಲನೆಯಂತಹ ಕೆಲಸ ಮಾಡುವಲ್ಲಿ ಮಹಿಳೆಯರು ಕೆಲವು ಅಡೆತಡೆಗಳನ್ನು ಅನುಭವಿಸುವುದು ಇದೆಯಾದರೂ ಹೆಚ್ಚಿನ ಯುವತಿಯರು ಚಾಲಕಿಯರಾಗಲು ಆಸಕ್ತಿ ತೋರುತ್ತಿರುವುದು ಸರ್ಕಾರದ ಯತ್ನಕ್ಕೆ ಪ್ರೋತ್ಸಾಹ ತುಂಬಿದೆ. ವಿಮಾನದ ಪೈಲಟ್‌ಗಳು, ಲೋಕೊ ಪೈಲಟ್‌ಗಳು, ಮೆಟ್ರೊ ಚಾಲಕರು ಹೀಗೆ ನಾನಾ ಹುದ್ದೆಗಳನ್ನು ಮಹಿಳೆಯರು ನಿಭಾಯಿಸಿದ್ದು ಇದೆಯಾದರೂ ಜನನಿಬಿಡ ರಸ್ತೆಗಳಲ್ಲಿ ಬಸ್ ಚಲಾಯಿಸುವುದು ಅವರಿಗೆ ಸವಾಲಿನ ಕೆಲಸವೇ ಆಗಿದೆ.

‘ರಸ್ತೆಗಳಲ್ಲೇ ಬಸ್ ಜತೆ ಹೆಚ್ಚಿನ ಸಮಯ ಕಳೆಯಬೇಕಾಗಿದ್ದರಿಂದ ಪ್ರಕೃತಿ ಕರೆಗೂ ಕೆಲವೊಮ್ಮೆ ತಾಪತ್ರಯ ಅನುಭವಿಸಬೇಕಾಗುತ್ತದೆ. ಹೀಗಾಗಿ ಕೆಲವೊಮ್ಮೆ ಪೆಟ್ರೋಲ್ ಬಂಕ್‌ಗಳಲ್ಲಿರುವ ಟಾಯ್ಲೆಟ್‌ಗಳನ್ನು ನಾವು ಬಳಸಬೇಕಾಗುತ್ತದೆ’ ಎಂದು ಸಂತೋಷ್ ಕುಮಾರಿ ವಿವರಿಸುತ್ತಾರೆ. ‘ಮನೆಯಲ್ಲಿ ಮಕ್ಕಳನ್ನು ಬಿಟ್ಟು ಬಂದವರ ಕಷ್ಟ ಅವರಿಗೆ ಮಾತ್ರ ಗೊತ್ತು. ಏನಾದರೂ ತುರ್ತು ಕರೆ ಬಂದರೆ ಉಳಿದವರಂತೆ ನಾವು ಕೆಲಸವನ್ನು ಅರ್ಧಕ್ಕೆ ಬಿಟ್ಟು ಮನೆಗೆ ಹೋಗುವಂತಿಲ್ಲ. ಬಸ್, ನಿಗದಿತ ಸ್ಥಳ ತಲುಪಿ, ವಾಪಸ್ ನಿಲ್ದಾಣಕ್ಕೆ ಬಂದ ಮೇಲಷ್ಟೇ ನಾವು ಮನೆಗೆ ಹೋಗಲು ಸಾಧ್ಯ. ಆದರೆ, ಸವಾಲಿನ ಈ ಕೆಲಸವನ್ನು ನಾವು ಆನಂದಿಸುತ್ತೇವೆ’ ಎಂದು ಹೇಳುತ್ತಾರೆ. ಆದ್ದರಿಂದಲೇ ಅವರೀಗ ದೆಹಲಿಯಲ್ಲಿ ಸೆಲೆಬ್ರಿಟಿಗಳಾಗಿ ಕಂಗೊಳಿಸುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65